ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಕರ್ನಾಟಕ ಸರ್ಕಾರ
RURAL DRINKING WATER AND SANITATION DEPARTMENT
GOVERNMENT OF KARNATAKA

ಸ್ವಚ್ಛತೆಯೇ ಸೇವೆ 2025
17 ಸೆಪ್ಟೆಂಬರ್- 2 ಅಕ್ಟೋಬರ್ 2025
ಸ್ವಚ್ಛೋತ್ಸವ

SWACHHOTSAV
Swachhata Hi Seva 2025
A Swachh Bharat Mission Initiative

# ಸ್ವಚ್ಛತೆಯೇ ಸೇವೆ: ಸ್ವಚ್ಛ ಪರಿಸರದೊಂದಿಗೆ ಪರಿವರ್ತನೆಯ ಪಾಠ




ಆಗಸ್ಟ್ 15, 2014 ರಂದು ಪ್ರಾರಂಭಗೊಂಡ "ಸ್ವಚ್ಛತೆಯೇ ಸೇವೆ" ಅಭಿಯಾನ ಇಂದು ಹೆಮ್ಮರವಾಗಿ ಬೆಳೆದಿದೆ. ಸ್ವಚ್ಛ, ಸುಂದರ ಹಾಗೂ ಸದೃಢ ಭಾರತದ ನಿರ್ಮಾಣಕ್ಕಾಗಿ ನಮ್ಮ ನಮ್ಮ ಗ್ರಾಮಗಳನ್ನು ಸ್ವಚ್ಛವಾಗಿಟ್ಟುಕೊಳ್ಳುವುದು ಅತೀ ಮುಖ್ಯ. ಇದೇ ಉದ್ದೇಶದಿಂದ ಪ್ರಾರಂಭಗೊಂಡಿರುವ ಈ ಅಭಿಯಾನವು ದೇಶದಾದ್ಯಂತ ಯಶಸ್ವಿಯಾಗಿ ನಡೆಯುತ್ತಿದೆ. ಈ ವರ್ಷ ಅಂದರೆ 2025ಕ್ಕೆ ಸ್ವಚ್ಛೋತ್ಸವ ಎಂಬ ಘೋಷವಾಕ್ಯದೊಂದಿಗೆ ಸೆಪ್ಟೆಂಬರ್ 17 ರಿಂದ ಅಕ್ಟೋಬರ್ 02 ರವರೆಗೆ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಆಚರಿಸಲಾಯಿತು.

ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಮಾತ್ರವಲ್ಲದೆ ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿಯೂ ನಡೆದ ಅಭಿಯಾನದಲ್ಲಿ ಹಲವು ಬ್ಲ್ಯಾಕ್ ಸ್ಪಾಟ್‌ಗಳ ಸ್ವಚ್ಛತೆ ಯಶಸ್ವಿಯಾಯ್ತು.

ಸಾರ್ವಜನಿಕರಲ್ಲಿ ನೈರ್ಮಲ್ಯ ಮತ್ತು ಶುಚಿತ್ವದ ಮಹತ್ವದ ಕುರಿತು ಅರಿವು ಮೂಡಿಸುವ ಉದ್ದೇಶದೊಂದಿಗೆ ಆರಂಭಗೊಂಡ ಸ್ವಚ್ಛತಾ ಹಿ ಸೇವಾ ಅಭಿಯಾನದಲ್ಲಿ, ಹಲವು ಮಹತ್ವದ ಆಶೋತ್ತರಗಳ ಸಾಕಾರಕ್ಕಾಗಿ ನಿರಂತರ ಶ್ರಮದಾನ ನಡೆಯಿತು. ತ್ಯಾಜ್ಯ ಶೇಖರಣಾ ತಾಣಗಳ ಸ್ವಚ್ಛತೆ (CTU) ಮತ್ತು ಪರಿವರ್ತನೆ, ಸಾರ್ವಜನಿಕ ಸ್ಥಳಗಳ ಸ್ವಚ್ಛತೆ, ಸಫಾಯಿಮಿತ್ರ ಸ್ವಚ್ಛತಾ ಶಿಬಿರಗಳು, ಸ್ವಚ್ಛ ಹಸಿರು ಆಚರಣೆ, ಸ್ವಚ್ಛತೆಗಾಗಿ ಪ್ರತಿಪಾದನೆ ಹೀಗೆ ವಿವಿಧ ಪರಿಕಲ್ಪನೆಗಳಿಗೆ ಜೀವ ತುಂಬಲಾಯ್ತು. ಇದರೊಂದಿಗೆ 'ಒಂದು ದಿನ ಒಂದು ಗಂಟೆ ಎಲ್ಲರೂ ಒಟ್ಟಿಗೆ' ಪರಿಕಲ್ಪನೆಯಡಿ ದೇಶಾದ್ಯಂತ ಏಕಕಾಲದಲ್ಲಿ ಸ್ವಚ್ಛತಾ ಶ್ರಮದಾನ ಯಶಸ್ವಿಯಾಯ್ತು. ಸ್ವಚ್ಛತೆಯೆಂಬುದು ಒಂದು ದಿನದ ಆಚರಣೆ ಮಾತ್ರವಲ್ಲ. ಅದು ಸದಾ ದೇಹ ಮತ್ತು ಮನಸ್ಸಿನಲ್ಲಿ ಅಡಕವಾಗಿರಬೇಕಾದ ಸಂಭ್ರಮ ಎಂಬುದು ಈ ಅಭಿಯಾನದ ಮೂಲಕ ಸಾಬೀತಾಗಿದೆ.

ಕರ್ನಾಟಕದಲ್ಲಿ ರಾಜ್ಯ ಮಟ್ಟದ ಸ್ವಚ್ಛತೆಯೇ ಸೇವೆ ಪಾಕ್ಷಿಕ ಅಭಿಯಾನಕ್ಕೆ ಪಂಚಾಯತ್ ರಾಜ್ ಕಾರ್ಯದರ್ಶಿ ಮತ್ತು RDWSD ಆಯುಕ್ತರಾದ ಶ್ರೀ ರಂದೀಪ್ ಡಿ ಅವರು ಚಾಲನೆ ನೀಡಿದರು. ಇದೇ ವೇಳೆ ವಿವಿಧ ಜಿಲ್ಲೆಗಳಲ್ಲಿ ವಿಭಿನ್ನ ರೀತಿಯಲ್ಲಿ ಅರ್ಥಪೂರ್ಣವಾಗಿ ಅಭಿಯಾನ ಆರಂಭಿಸಲಾಯ್ತು. ಸ್ವಚ್ಛತೆಯ ಪ್ರತಿಜ್ಞಾವಿಧಿ ಸ್ವೀಕರಿಸುವುದರೊಂದಿಗೆ ಸ್ವಚ್ಛ ಭಾರತದ ಸಾಕಾರಕ್ಕೆ ಪಣ ತೊಡುವ ಪ್ರಯತ್ನ ಮಾಡಲಾಯ್ತು. ಶಾಲಾ-ಕಾಲೇಜುಗಳ ಮಕ್ಕಳು, ಮಹಿಳೆಯರು, ನಾಗರಿಕರು, ಸರ್ಕಾರಿ ಅಧಿಕಾರಿಗಳ ಜೊತೆಗೆ ರಾಜ್ಯದ ಜನರೆಲ್ಲಾ ಸಂಪೂರ್ಣ ಸ್ವಚ್ಛತೆಯತ್ತ ಮುಂದಡಿಯಿಟ್ಟರು.



## ಸಾರ್ವಜನಿಕ ಸ್ಥಳಗಳ ಸ್ವಚ್ಛತೆ

ಗ್ರಾಮಗಳ ರಸ್ತೆಗಳು, ಬೀದಿ ಬದಿ, ಬಸ್ ನಿಲ್ದಾಣ, ಪಾರ್ಕ್, ದೇವಸ್ಥಾನಗಳು, ಕ್ರೀಡಾಂಗಣಗಳು, ರುದ್ರಭೂಮಿ, ಐತಿಹಾಸಿಕ ಕಲ್ಯಾಣಿಗಳು, ಸಮುದ್ರ ತೀರ, ಶಾಲೆ, ಅಂಗನವಾಡಿ ಕೇಂದ್ರಗಳ ಸುತ್ತಮುತ್ತ ಸೇರಿದಂತೆ ಸಾರ್ವಜನಿಕ ಸ್ಥಳಗಳಲ್ಲಿ ಸ್ವಚ್ಛತಾ ಕಾರ್ಯ ಯಶಸ್ವಿಯಾಗಿ ನಡೆಯಿತು. ಹಲವು ಸರ್ಕಾರಿ ಕಚೇರಿಗಳ ಸುತ್ತಮುತ್ತ ಬೆಳೆದ ಗಿಡಗಂಟಿಗಳನ್ನು ಸ್ವಚ್ಛಗೊಳಿಸಲಾಯ್ತು. ಹಲವು ಬ್ಲ್ಯಾಕ್ ಸ್ಪಾಟ್‌ಗಳನ್ನು ಸ್ವಚ್ಛಗೊಳಿಸಿ ಸಂಪೂರ್ಣ ರೂಪಾಂತರಗೊಳಿಸಿದ್ದು ಅಭಿಯಾನದ ವಿಶೇಷ. ಇಷ್ಟೇ ಅಲ್ಲ; ಜಲಮೂಲಗಳಾದ ಓವರ್‌ಹೆಡ್ ಟ್ಯಾಂಕ್, ಮಿನಿ ಟ್ಯಾಂಕ್ ಸ್ವಚ್ಛಗೊಳಿಸುವ ಜೊತೆಗೆ ಕಲ್ಯಾಣಿಗಳ ಸುತ್ತಲು ಬೆಳೆದಿದ್ದ ಗಿಡಗಂಟಿಗಳನ್ನು ಸ್ವಚ್ಛಗೊಳಿಸಲಾಯ್ತು.




## ಜಾಥಾ, ಮಾನವ ಸರಪಳಿ ಮೂಲಕ ಜಾಗೃತಿ

ಭಿನ್ನ ವಿಭಿನ್ನ ವಿಷಯಗಳ ಮೂಲಕ ಸಮುದಾಯದಲ್ಲಿ ಸ್ವಚ್ಛತೆ ಮತ್ತು ನೈರ್ಮಲ್ಯ ಜಾಗೃತಿ ಮೂಡಿಸಲಾಯ್ತು. ರಂಗೋಲಿ ಮೂಲಕ ಜಾಗೃತಿ, ಸೈಕಲ್ ಹಾಗೂ ಬೈಕ್ ಜಾಥಾ, ಮಾನವ ಸರಪಳಿ ಮೂಲಕ ಸ್ವಚ್ಛತೆಯ ಅರಿವು ಮೂಡಿಸಲಾಯ್ತು. ಹಲವು ಜಿಲ್ಲೆಗಳಲ್ಲಿ ಒಂದೊಳ್ಳೆ ವಿಷಯದಡಿ ಗಿಡ ನೆಡುವ ಪ್ರಯತ್ನವೂ ನಡೆಯಿತು. ತಾಯಿಯ ಹೆಸರಿನಲ್ಲಿ ಗಿಡ ನೆಡುವ ಮೂಲಕ ಸ್ವಚ್ಛತೆಯ ಜೊತೆಗೆ ವಿಭಿನ್ನವಾಗಿ ಪರಿಸರ ಕಾಳಜಿ ವಹಿಸಲಾಯ್ತು. ಅಲ್ಲದೆ ಮಕ್ಕಳಿಗೆ ಪರಿಸರ ಮತ್ತು ಸಂಬಂಧದ ಮೌಲ್ಯವನ್ನು ಮನಮುಟ್ಟುವಂತೆ ತಿಳಿಸಲಾಯ್ತು.




## ಸಫಾಯಿ ಮಿತ್ರರ ಆರೋಗ್ಯ ತಪಾಸಣೆ

ಅಭಿಯಾನದ ಭಾಗವಾಗಿ ಸಫಾಯಿ ಮಿತ್ರ ಆರೋಗ್ಯ ಶಿಬಿರಗಳು ಯಶಸ್ವಿಯಾಗಿ ನಡೆದವು. ಹಳ್ಳಿ ಹಳ್ಳಿಗಳನ್ನು ಸ್ವಚ್ಛವಾಗಿಡುವಲ್ಲಿ ಸರ್ವೋಚ್ಛ ಪಾತ್ರವಹಿಸುವ ಸಫಾಯಿ ಮಿತ್ರರು, ನೈರ್ಮಲ್ಯ ಕಾರ್ಯಕರ್ತರ ಆರೋಗ್ಯ ತಪಾಸಣೆ ಮಾಡುವ ಮೂಲಕ ಆರೋಗ್ಯದ ಕಾಳಜಿ ವಹಿಸಲಾಯ್ತು. ಅಲ್ಲದೆ ಸ್ವಚ್ಛತಾ ಮಿತ್ರರಿಗೆ ವಿಭಿನ್ನವಾಗಿ ಗೌರವ ಸಮರ್ಪಣೆ ಮಾಡಲಾಯಿತು.